O.S. No- 38/2021

DW-1

ದಿನಾಂಕಃ 24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ಶ್ರೀ ವಿ.ಎಸ್.ಬಿ. ವಾದಿ ಪರ ವಕೀಲರಿಂದಃ** ನಾನು ಎಸ್.ಎಸ್.ಎಲ್.ಸಿ. ವರೆಗೆ ಕಲಿತಿದ್ದೇನೆ. ಜಮಖಂಡಿಯಲ್ಲಿ ವಾಸವಾಗಿರುತ್ತೇನೆ. ಶಿರುಗಪ್ಪದಲ್ಲಿ ಜಮೀನುಗಳು ಇವೆ. ನನ್ನ ತಂದೆ ಹಾಗೂ ವಾದಿಯ ತಂದೆ ಅಣ್ಣ – ತಮ್ಮಂದಿರು ಎಂದರೆ ಸರಿ. ನನ್ನ ತಂದೆಯವರಿಗೆ 4 ಜನ ಅಣ್ಣ ತಮ್ಮಂದಿರು ಇರುತ್ತಾರೆ. ನನ್ನ ತಂದೆ ಹಾಗೂ ಉಳಿದ ಸಹೋದರರು ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ಪಾಲುವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ದಾವಾ ಸರ್ವೇ ನಂ. 141/13 ವಿಸ್ತೀರ್ಣ 2 ಎಕರೆ 19 ಗುಂಟೆ ಜಮೀನು, 141/4 ಎ ವಿಸ್ತೀರ್ಣ 2 ಎಕರೆ 19 ಗುಂಟೆ ಜಮೀನು ಇದೆ ಎಂದರೆ ಸರಿ. ದಿನಾಂಕಃ 21.10.2013 ರಲ್ಲಿ ವಾದಿಯ ತಂದೆ ಅಣ್ಣಪ್ಪ ಶ್ರೀಕಾಂತ ಸದಾಶಿವ ಯಳ್ಳೂರ ಇವರ ಕಡೆಯಿಂದ ಖರೀದಿಸಿದ್ದರು ಎಂದರೆ ಸರಿ. ನಂತರ ಮೂಲ ಸರ್ವೇ ನಂ. 141/4 ವಿಸ್ತೀರ್ಣ 8 ಎಕರೆ 8 ಗುಂಟೆ ಜಮೀನಿನ ಪಶ್ಚಿಮ ಭಾಗದ 4 ಎಕರೆ 38 ಗುಂಟೆ ಜಮೀನನ್ನು ವಾದಿಯ ತಂದೆ ಖರೀದಿಸಿದ್ದರು ಎಂದರೆ ಸರಿ. ಸದರಿ ಆಸ್ತಿಯನ್ನು ವಾದಿಯ ತಂದೆ ತಮ್ಮ ಇಬ್ಬರು ಮಕ್ಕಳಿಗೆ ಪಾಲು ವಾಟ್ನಿ ಮಾಡಿಕೊಟ್ಟರು ಎಂದರೆ ನನಗೆ ಗೊತ್ತಿಲ್ಲ.

ಖರೀದಿಸಿದ ದಿನದಿಂದ ವಾದಿಯರೇ ದಾವಾ ಆಸ್ತಿಯ ಕಬ್ಜೆಯಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿಗೆ ನೀರಿನ ಸೌಲಭ್ಯ ಇಲ್ಲದೇ ಇರುವುದರಿಂದ ಕೃಷ್ಣಾನದಿಯಿಂದೆ ಪೈಪಲೈನ್ ಮಾಡಿಕೊಂಡು ಬಂದರು ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸುಮಾರು ರೂ.18 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕೆ.ಬಿ.ಜಿ.ಎಲ್., ಆಲಮಟ್ಟಿ ಡಿವಿಜನ್ ಇವರಿಂದ ಪರವಾನಗಿ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಅದರಿಂದ ಕಬ್ಬು, ಅರಿಶಿಣ, ಗೋಧಿ, ಜೋಳ ಬೆಳೆ ಬೆಳೆಯುತ್ತಾರೆ ಎಂದರೆ ಗೊತ್ತಿಲ್ಲ. ಇದರಿಂದ ಅವರಿಗೆ ಸಾಕಷ್ಟು ಉತ್ಪನ್ನ ಬರುತ್ತಿರುವುದರಿಂದ ನನಗೆ ಅವರ ಮೇಲೆ ಅಸೂಯೆ ಬಂದಿದೆ ಎಂದರೆ ಸರಿಯಲ್ಲ.

ಶಿರಗುಪ್ಪಿಯ ಸರ್ವೇ ನಂ. 27/2 ಜಮೀನನ್ನು ಪಾಲುವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ, ಅದು ಮೂರು ಬಾರಿ ಪಾಲುವಾಟ್ನಿ ಮಾಡಿಕೊಂಡಿದ್ದಾರೆ. ಈಗಲೂ ಕೂಡ ಮೇಲಿನ ನ್ಯಾಯಾಲಯದಲ್ಲಿ ಪಾಲುವಾಟ್ನಿ ದಾವೆ ಚಾಲ್ತಿ ಇದೆ ಎಂದು ನುಡಿಯುತ್ತಾರೆ. ವಾದಿಯರು ಮೇಲಿನ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಪಾಲುವಾಟ್ನಿ ದಾವೆ ದಾಖಲಿಸಿದ್ದಾರೆ ಎಂದರೆ ಸರಿ. ಸರ್ವೇ ನಂ. 27/2 ಜಮೀನು ನನ್ನ ಹೆಸರಿನಲ್ಲಿದೆ ಎಂದರೆ 40 ವರ್ಷದಿಂದ ನನ್ನ ಹೆಸರಿನಲ್ಲಿದೆ. ಅದರ ಸಿಟ್ಟಿನಿಂದ ವಾದಿಯರಿಗೆ ಅವರ ಪೈಪಲೈನ್ ಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ನನ್ನ ವಿರುದ್ಧ ಪೋಲೀಸ ಠಾಣೆಯಲ್ಲಿ ದೂರು ದಾಖಲಿಸಲು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಾಲುವಾಟ್ನಿ ದಾವೆ ದಾಖಲಿಸಿದ ದಿನದಿಂದ ನನಗೂ ಹಾಗೂ ವಾದಿಯರಿಗೂ ಮನಸ್ಸು ಸರಿಯಿಲ್ಲ ಎಂದರೆ ಅವರು ದಾವೆ ಮಾಡಿದ್ದಾರೆ ನನಗೆ ಸಂಬಂಧವಿಲ್ಲ.

ಮುಂದುವರಿದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.